<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲು ಶ್ರೀಮತಿ ಬಿ ಟಿ ಎಸ್ ವಕೀಲರಿಂದಃ **1** ರಿಂದ **9** ನೇ ಪ್ರತಿವಾದಿಯರ ಪರವಾಗಿಃ</u>

1. ನಾನು 7 ನೇ ತರಗತಿವರೆಗೆ ಓದಿದ್ದೇನೆ. ದಾವೆ ಸಲ್ಲಿಸಲು ನಮ್ಮ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಸ.ನಂ.150, 151, 183 ರ ಜಮೀನುಗಳ ಬಗ್ಗೆ ಈ ದಾವೆಯನ್ನು ಸಲ್ಲಿಸಿದ್ದೇನೆ. ಸ.ನಂ.150 ರ ಜಮೀನು ಮೊದಲು 17 ಎಕರೆ 25 ಗುಂಟೆ ಇದ್ದು, ಈಗ 8 ಮುಕ್ಕಾಲು, 8 ಮುಕ್ಕಾಲು ಎಕರೆ ಆಗಿದೆ. ಸ.ನಂ.151 ರಲ್ಲಿ 28 ಎಕರೆ 11 ಗುಂಟೆ ಜಮೀನು, ಸ.ನಂ.183 ರಲ್ಲಿ 8 ಎಕರೆ 01 ಗುಂಟೆ ಜಮೀನು ಇದೆ.

2. ಸ.ನಂ.150 ರ ಜಮೀನಿನ ಉತ್ತರಕ್ಕೆಃ ವೀರಧೀಮನಹಳ್ಳಿ ರಸ್ತೆ, ನನಗೆ ಪೂರ್ವ ಪಶ್ಚಿಮ ದಿಕ್ಕುಗಳು ಗೊತ್ತಾಗುವುದಿಲ್ಲ. ಸದರಿ ಸ್ವತ್ತಿನ 4 ದಿಕ್ಕಿಗೆ ನಮ್ಮ ಕುಟುಂಬದವರೆ ಸಾವಧೀನ ಇರುತ್ತಾರೆ, ಅಂದರೆ ಓಬಯ್ಯನ ಮಕ್ಕಳೇ ಇದ್ದಾರೆ. ನಮಗೆ ಜಮೀನಿನ ಸುತ್ತಾಮುತ್ತಾ ನಮ್ಮ ಬಂಧುಬಳಗದವರೆ ಇದ್ದಾರೆ ನನಗೆ ದಿಕ್ಕುಗಳು ನಿಖರವಾಗಿ ಹೇಳಲಾಗುವುದಿಲ್ಲ. ಅದೇ ರೀತಿ ಉಳಿದ ಸ.ನಂ.ಗಳ ಜಮೀನುಗಳಿಗೂ ಕೂಡ ನಮ್ಮವರೇ ಸುತ್ತಾಮುತ್ತ ಇದ್ದು ದಿಕ್ಕುಗಳು ಮತ್ತು ಅವರುಗಳ ಹೆಸರುಗಳು ನಿಖರವಾಗಿ ಹೇಳಲಾಗುವುದಿಲ್ಲ. ದಾವಾ ಸ್ವತ್ತುಗಳು ಹಾಲಿ ಬೋರಯ್ಯ ಸಣ್ಣಪಾಪಯ್ಯ ಇವರುಗಳ ಹೆಸರಿಗೆ ಇತ್ತೀಚೆಗೆ ಮಾಡಿಸಿಕೊಂಡಿದ್ದಾರೆ.

3. ನನಗೀಗ 39 ವರ್ಷ. ನಮ್ಮ ತಂದೆ ಬೋರಯ್ಯ ಯಾನೆ ದೋಳಬೋರಯ್ಯ, ನಮ್ಮ ತಾಯಿ ಪಾಲಮ್ಮ. ನಮ್ಮ ತಂದೆಯ ಜನ್ಮದಿನಾಂಕ, ತಿಂಗಳು ಇಸವಿ ನನಗೆ ಹೇಳಲಾಗುವುದಿಲ್ಲ ನಾನು ಎಲ್ಲಾ ದಾಖಲೆ ಕೋರ್ಟಿಗೆ ಕೊಟ್ಟಿದ್ದೇನೆ. ನಮ್ಮ ತಂದೆ ಹುಟ್ಟಿದದಿನಾಂಕ ತೋರಿಸಲು ನಾನು ಆಧಾರ್ ಕಾರ್ಡ್ ?ಮತ್ತು ರೇಷನ್ ಕಾರ್ಡ್ ಕೊಟ್ಟಿದ್ದೇನೆ, ಅವರು ತೀರಿಕೊಂಡ ದಾಖಲೆ ಕೂಡಾ ಕೊಟ್ಟಿದ್ದೇನೆ. ನಮ್ಮ ತಂದೆಯ ಜನ್ಮ ದಿನಾಂಕ ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸದೇ ಇದ್ದರೂ ಹಾಜರುಪಡಿಸಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಮ್ಮ ತಂದೆ ಚಿತ್ರಯ್ಯನಹಟ್ಟಿಯಲ್ಲೇ ಹುಟ್ಟಿರುತ್ತಾರೆ ನಮ್ಮ ತಂದೆ ಚಿತ್ರಯ್ಯನಹಟ್ಟಿಯಲ್ಲೇ ಹುಟ್ಟಿರುದರ ಬಗ್ಗೆ ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯ ತಾಯಿಯ ಹೆಸರು ಪಾಲಮ್ಮ. ನಮ್ಮ ತಂದೆಗೆ 5 ಜನ ಸಹೋದರ ಸಹೋದರರು, ಅವರು ಯಾರು ಯಾರು ಎಂದರೆ ಬೋರಯ್ಯ, ಓಬಯ್ಯ, ಬಸಮ್ಮ, ಪುಟ್ಟಮ್ಮ ಮತ್ತು ಪಾಪಣ್ಣ. ನಮ್ಮ ತಂದೆ ಯಾವಾಗ ತೀರಿಕೊಂಡರು ಎಂದು ತೋರಿಸಲು ನಾನು ದಾಖಲೆ ಕೊಟ್ಟಿದ್ದೇನೆ ನನಗೆ ತಾರೀಖು ಹೇಳಲು ನೆನಪಿಲ್ಲ. ನಮ್ಮ ಚಿಕ್ಕಪ್ಪ ಓಬಯ್ಯ ಎಲ್ಲಿ ತೀರಿಕೊಂಡರು ಮತ್ತು ಯಾವಾಗ ತೀರಿಕೊಂಡರು ಎಂದು ಹೇಳಲಾಗುವುದಿಲ್ಲ. ನಾನು ದಾಖಲೆ ಕೊಟ್ಟಿದ್ದೇನೆ. ನಮ್ಮ ತಂದೆಯ ತಾಯಿ ಪಾಲಮ್ಮ ತೀರಿಕೊಂಡ ಬಗ್ಗೆ ದಾಖಲೆಯನ್ನು ಕೊಟ್ಟಿದ್ದೇನೆ ದಿನಾಂಕ ಮತ್ತು

ಅವರು ಎಲ್ಲಿ ತೀರಿಕೊಂಡರು ಎನ್ನುವ ಬಗ್ಗೆ ನನಗೆ ಹೇಳಲಾಗುವುದಿಲ್ಲ ಎಂದರೆ ಅವರು ಚಿತ್ರಯ್ಯನಹಟ್ಟಿಲ್ಲಿಯೇ ತೀರಿಕೊಂಡರು. ನನ್ನ ತಂದೆ , ಚಿಕ್ಕಪ್ಪ ಮತ್ತು ಅಜ್ಜಿ ಪಾಲಮ್ಮ ಎಲ್ಲಿ ಮತ್ತು ಯಾವಾಗ ತೀರಿಕೊಂಡರು ಎನ್ನುವುದರ ಬಗ್ಗೆ ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸದೇ ಇದ್ದರು ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ನಂ.11 ರಿಂದ 13 ಚಿತ್ರಯ್ಯನಹಟ್ಟಿಯಲ್ಲೇ ಹುಟ್ಟಿದ್ದು ಅವರು ಜನ್ಮ ದಿನಾಂಕದ ಬಗ್ಗೆ ದಾಖಲೆಗಳನ್ನು ಕೊಟ್ಟಿದ್ದೇನೆ ನನಗೆ ಹೇಳಲಾಗುವುದಿಲ್ಲ. ಜನ್ಮ ದಿನಾಂಕದ ದಾಖಲೆಗಳನ್ನು ಹಾಜರುಪಡಿಸದೇ ಇದ್ದರೂ ನಾನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವ ಜನ್ಮ ದಿನಾಂಕಗಳನ್ನು ಹೇಳಲಾಗುವುದಿಲ್ಲ. ಎಲ್ಲಾ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ.

5. ನಮ್ಮ ತಂದೆ ಬೋರಯ್ಯ ಓದಿಲ್ಲ. ನನ್ನ ಚಿಕ್ಕಪ್ಪ ಓಬಯ್ಯ ಕೂಡಾ ಓದಿಲ್ಲ. 13 ನೇ ವಾದಿ ಪಾಪಣ್ಣ 7 ನೇ ತರಗತಿ ಓದಿರಬೇಕು. ಅವರು 7 ನೇ ತರಗತಿವರೆಗೆ ಓದಿರುವುದರ ಬಗ್ಗೆ ಶಾಲಾ ದಾಖಲಾತಿಯನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ.

6. ಪ್ರತಿವಾದಿಯರ ಮೂಲ ಪುರಷ ಕೊಂಡಬೋರಯ್ಯನ ವಂಶಸ್ಥರು ನಾವಲ್ಲ ಎಂದರೆ ಸರಿಯಲ್ಲ. ಕೊಂಡಬೋರಯ್ಯನ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. ಕೊಂಡಬೋರಯ್ಯನ ಮಗ ಓಬಯ್ಯ ಹೆಂಡತಿಯ ಹೆಸರು ಕೂಡಾ

ನನಗೆ ಗೊತ್ತಿಲ್ಲ ಎಂದರೆ ಸರಿ. ಕೊಂಡಬೋರಯ್ಯನ ಮಗ ಓಬಯ್ಯನಿಗೆ ಐದು ಜನ ಮಕ್ಕಳು ಅವರು ಯಾರು ಯಾರೆಂದರೆ ದೊಡ್ಡಪಾಪಯ್ಯ, ಸಣ್ಣಪಾಪಯ್ಯ, ದೊಡ್ಡಬೋರಯ್ಯ, ದೊಡ್ಡಪಾಲಯ್ಯ ಮತ್ತು ಸಣ್ಣಪಾಲಯ್ಯ. ಕೊಂಡಬೋರಯ್ಯನ 2 ನೇ ಮಗ ಪಾಪಯ್ಯನಿಗೆ ಇಬ್ಬರು ಹೆಂಡಿರು. ಅವರು ಪಾಪಮ್ಮ ಮತ್ತು ಪಾಲಮ್ಮ. ಕೊಂಡಬೋರಯ್ಯ ಮೊದಲನೇ ಮಗ ಬೋರಯ್ಯ ಹಾಗೂ ಸದರಿ ಬೋರಯ್ಯನಿಗೆ ಕುರಿಪಾಲಯ್ಯ ಯಾನೆ ಪಾಲಯ್ಯ ಎಂಬ ಮಗನಿದ್ದು ಅವನಿಗೆ ಇಬ್ಬರು ಹೆಂಡತಿಯರು. ಅವರು ಪಾಲಮ್ಮ ಮತ್ತು ಪಾಪಮ್ಮ ಆಗಿದ್ದು ಅವರಿಬ್ಬರು ಸಹೋದರಿಯರು. ಕುರಿಪಾಲಯ್ಯ ಸುಮಾರು 50 ವರ್ಷಗಳ ಹಿಂದೆಯೇ ತೀರಿಕೊಂಡಿದ್ದಾರೆ ಎಂದರೆ 1966 ನೇ ಇಸವಿಯ ಹಿಂದೆ ಮುಂದೆ ತೀರಿಕೊಂಡಿದ್ದಾನೆ.

7. ನಮ್ಮ ತಂದೆ ಬೋರಯ್ಯ ಮತ್ತು ಚಿಕ್ಕಪ್ಪ ಓಬಯ್ಯ ಮತಚಲಾವಣೆ ಮಾಡುತ್ತಿದ್ದರು ಎಂದರೆ ಸರಿ. ಅವರಿಬ್ಬರು ಮೊಳಕಾಲ್ಮೂರು ತಾಲ್ಲೂಕು ಚೌಳಕೆರೆ ಗ್ರಾಮದಲ್ಲಿ ಮತ ಚಲಾಯಿಸುತ್ತಿದ್ದರು ಎಂದರೆ ಸರಿ, ನಾನು ಸ್ವತಃ ಹೇಳುವುದೇನೆಂದರೆ ಮದುವೆ ಆದ ಮೇಲೆ ಅಲ್ಲಿದ್ದರು. ಕೊಂಡಬೋರಯ್ಯ ವಂಶಸ್ಥರು ನಾವು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

8. ಪ್ರತಿವಾದಿಯರು ಈ ಕೇಸಿನಲ್ಲಿ ಏನು ತಕರಾರು ಹಾಕಿದ್ದಾರೆ ಎನ್ನುವ ವಿಚಾರ ತಿಳಿದುಕೊಂಡಿದ್ದೇನೆ. ಕೊಂಡಬೋರಯ್ಯನ ವಂಶಸ್ಥರು ತಮ್ಮ

ತಮ್ಮಲ್ಲಿಯೇ ಬಾಯಿ ಮಾತಿನ ಮೂಲಕ ಸುಮಾರು 70 ವರ್ಷಗಳ ಹಿಂದೆಯೇ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ, ಕುರಿಪಾಲಯ್ಯ ಬಾಯಿ ಮಾತಿನ ಮೂಲಕ ತನ್ನ ಭಾಗಕ್ಕೆ ಬಂದಿದ್ದ ಆಸ್ತಿಯನ್ನು ದಿಃ06.06.1966 ರಂದು ತನಗೆ ಮಕ್ಕಳು ಇಲ್ಲದ ಕಾರಣ ತನ್ನ 2 ನೇ ಹೆಂಡತಿ ಪಾಪಮ್ಮನಿಗೆ ದಾನ ಪತ್ರದ ಮೂಲಕ ಸ್ವತ್ತನ್ನು ಬರೆದುಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಓಬಯ್ಯ, ಪಾಪಯ್ಯ ಮತ್ತು ಪಾಪಮ್ಮ 3 ಜನರು ಸೇರಿ ಸೃಷ್ಟಿ ಮಾಡಿರುವ ಪತ್ರ ಅದಾಗಿದೆ ಅದು ಸುಳ್ಳು ಪತ್ರ. ಸದರಿ ಪತ್ರ ಸೃಷ್ಟಿ ಮಾಡಿಕೊಂಡಿರುತ್ತಾರೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ದಿನಾಂಕಃ14.06.1966 ರಂದು ಕೊಂಡಬೋರಯ್ಯನ ವಾರಸುದಾರರಾದ ಓಬಯ್ಯ, ಪಾಪಯ್ಯ, ಪಾಲಯ್ಯನ ಹೆಂಡತಿ ಪಾಪಮ್ಮ ನೋಂದಾಯಿತ ಪಾಲು ವಿಭಾಗ ಪತ್ರವೊಂದನ್ನು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ದಿಃ14.06.1966 ರಲ್ಲಿ ಹುಟ್ಟೇ ಇರಲಿಲ್ಲ ಎಂದರೆ ಸರಿ. ನಾನು ಸ್ವತಃ ಹೇಳುವುದೇನೆಂದರೆ ನಮ್ಮ ತಂದೆ ಇದ್ದರು. ದಿಃ14.06.1966 ರ ನೋಂದಾಯಿತ ಪಾಲು ವಿಭಾಗ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ನನಗೆ ಆ ವಿಷಯವೇ ಗೊತ್ತಿಲ್ಲ.

10. ದಿಃ14.06.1966 ರ ನೋಂದಾಯಿತ ಪಾಲು ವಿಭಾಗ ಪತ್ರದಲ್ಲಿ ಪಾಪಮ್ಮನ ಭಾಗಕ್ಕೆ ಬಂದಿದ್ದ ಸ್ವತ್ತುಗಳು ಪಾಲು ವಿಭಾಗ ಆದ ಕಾಲದಿಂದಲೂ

ಆಕೆಯ ಸ್ವಾಧೀನಾನುಭವದಲ್ಲಿ ಇದ್ದವು ಎಂದರೆ ಸರಿಯಲ್ಲ. ನಾವು ಸ್ವಾಧೀನಾನುಭವದಲ್ಲಿದ್ದೆವು. ಓಬಯ್ಯನ ಭಾಗಕ್ಕೆ ಬಂದಿದ್ದ ಸ್ವತ್ತುಗಳು ಅವನ ನಂತರ ಅವರ ವಾರಸುದಾರರ ಸ್ವಾಧೀನಾನುಭವಕ್ಕೆ ಬಂದಿರುತ್ತದೆ ಎಂದರೆ ಸರಿ. ಪಾಪಯ್ಯನ ಭಾಗಕ್ಕೆ ಬಂದಿದ್ದ ಸ್ವತ್ತುಗಳು ಅವನ ನಂತರ ಅವರ ವಾರಸುದಾರರ ಸ್ವಾಧೀನಾನುಭವಕ್ಕೆ ಬಂದಿರುತ್ತದೆ ಎಂದರೆ ಸರಿ. ದಿನಾಂಕಃ14.06.1966 ರಿಂದಲೂ ಒಟ್ಟು ಕುಟುಂಬ ವ್ಯವಸ್ಥೆ ನಮ್ಮ ಕುಟುಂಬದಲ್ಲಿ ಇಲ್ಲ ಎಂದರೆ ಸರಿಯಲ್ಲ. ಒಟ್ಟು ಕುಟುಂಬದಲ್ಲಿ ನಾವು ಇಲ್ಲ ಎನ್ನುವ ವಿಚಾರ ನಮ್ಮ ಅಜ್ಜಿ ಪಾಲಮ್ಮನಿಗೂ ಗೊತ್ತಿತ್ತು ಎಂದರೆ ಸರಿಯಲ್ಲ.

11. ಪಾಪಮ್ಮನ ಭಾಗಕ್ಕೆ ಬಂದ ಸ್ವತ್ತುಗಳನ್ನು ಮತ್ತು ಪಾಪಯ್ಯನ ಭಾಗಕ್ಕೆ ಬಂದ ಸ್ವತ್ತುಗಳನ್ನು ಸೇರಿಸಿ ಈ ದಾವೆಯನ್ನು ತಂದಿರುತ್ತೇವೆ ಎಂದರೆ ಸರಿಯಲ್ಲ. ಎಲ್ಲಾ ಜಂಟಿಯಾಗಿವೆ. ಪಾಪಮ್ಮನ ಭಾಗಕ್ಕೆ ಬಂದಿದ್ದ ಎಲ್ಲಾ ಸ್ವತ್ತುಗಳನ್ನು ಈ ದಾವಾದಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಸರಿಯಲ್ಲ. ಪಾಪಯ್ಯನ ಭಾಗಕ್ಕೆ ಬಂದಿದ್ದ ಎಲ್ಲಾ ಸ್ವತ್ತುಗಳನ್ನು ಈ ದಾವಾದಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಸರಿಯಲ್ಲ. ಪಾಪಮ್ಮ, ಪಾಪಯ್ಯ ಮತ್ತು ಓಬಯ್ಯ ತಮ್ಮ ತಮ್ಮ ಭಾಗಕ್ಕೆ ಬಂದಿದ್ದ ಸ್ವತ್ತುಗಳ ಪೈಕಿ ಕೆಲವು ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ನಮಗೆ ಆ ಬಗ್ಗೆ ಮಾಹಿತಿ ಇಲ್ಲ. ಆ ಎಲ್ಲಾ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಸರಿ, ನಾನು ಸ್ವತಃ ಹೇಳುವುದೇನೆಂದರೆ ಸ.ನಂ.300, 301 ಮತ್ತು 302 ರ ಜಮೀನುಗಳ ದಾಖಲೆಗಳನ್ನು ಇನ್ನೂ ಹುಡುಕುತ್ತಿದ್ದೇವೆ ಅವಿನ್ನು ಸಿಕ್ಕಿಲ್ಲ.

12. ಪಾಪಮ್ಮ ತನ್ನ ಭಾಗಕ್ಕೆ ಬಂದಿದ್ದ ಸ.ನಂ.150/2 ರಲ್ಲಿ 4 ಎಕರೆ 4 ಗುಂಟೆ ಜಮೀನನ್ನು, ಸ.ನಂ.183/1 ರಲ್ಲಿ 1 ಎಕರೆ 22 ವರೆ ಗುಂಟೆ ಜಮೀನನ್ನು ತನ್ನ ಗೃಹಕೃತ್ಯದ ಅನಿವಾರ್ಯತೆಗಾಗಿ ತನ್ನ ಜೀವನ ಪೋಷಣೆಗಾಗಿ ದಿನಾಂಕಃ26.04.1996 ರಂದು ರೂ.97,000/- ಗಳಿಗೆ ಮಾರಾಟ ಮಾಡಿರುತ್ತಾಳೆ ಎಂದರೆ ಅವೆಲ್ಲಾ ಸುಳ್ಳು. ಆ ಸ್ವತ್ತುಗಳು 1 ನೇ ಪ್ರತಿವಾದಿ ಬೈನಾಕಲ್ ಬೋರಯ್ಯ ಯಾನೆ ಬಟಾಣಿ ಬೋರಯ್ಯನ ಹಕ್ಕು ಮತ್ತು ಸ್ವಾಧೀನದಲ್ಲಿ ಆತ ಖರೀದಿಸಿದಾಗಿನಿಂದಲೂ ಇದೆ ಎಂದರೆ ಸರಿಯಲ್ಲ. ನಾನು ಸ್ವತಃ ಮುಂದುವರೆದು ಹೇಳುವುದೇನೆಂದರೆ ನಾವೇ ಸ್ವಾಧೀನದಲ್ಲಿದ್ದು ನಾವೇ ಅವನಿಗೆ ಕೋರಿಗೆ ಕೊಟ್ಟಿರುತ್ತೇವೆ. ನಾನು ಸ್ವತಃ ಹೇಳುವುದೇನೆಂದರೆ ನಾವು ಚೌಳಕೆರೆಯಲ್ಲಿದ್ದುದ್ದರಿಂದ ಜಮೀನು ಚೆನ್ನಾಗಿರಲಿ ಎನ್ನುವ ಕಾರಣದಿಂದ ಮತ್ತು ಮಾಡಿಕೊಂಡು ತಿನ್ನಲಿ ಎಂದು ನಾವೇ 1 ಮತ್ತು 2 ನೇ ಪ್ರತಿವಾದಿಗೆ ಕೋರಿಗೆ ಕೊಟ್ಟಿರುತ್ತೇವೆ. 15 ವರ್ಷಗಳ ಹಿಂದೆ ಅದನ್ನು ಕೋರಿಗೆ ಕೊಟ್ಟಿದ್ದು ಆ ಬಗ್ಗೆ ಯಾವುದೇ ದಾಖಲೆ ಮಾಡಿಕೊಂಡಿಲ್ಲ. 1 ಮತ್ತು 2 ನೇ ಪ್ರತಿವಾದಿಗೆ ಕೋರಿಗೆ ಕೊಟ್ಟಿದ್ದು ಆ ಬಗ್ಗೆ ಯಾವುದೇ ದಾಖಲೆ ಮಾಡಿಕೊಂಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

13. 1 ನೇ ಪ್ರತಿವಾ ಬೈನಾಕಲ್ ಬೋರಯ್ಯ ಯಾನೆ ಬಟಾಣಿ ಬೋರಯ್ಯ ಖರೀದಿ ಮಾಡಿದಾಗಿನಿಂದಲೂ ಸದರಿ ಸ್ವತ್ತಿಗೆ ಕಂದಾಯ ವಗೈರೆ ಪಾವತಿ ಮಾಡುತ್ತಾ ಬರುತ್ತಿದ್ದಾರೆ ಎಂದರೆ ಮೋಸದಿಂದ ಸೃಷ್ಟಿ ಮಾಡಿಕೊಂಡಿದ್ದಾನೆ. ಪಾಪಮ್ಮ ತನ್ನ ಭಾಗಕ್ಕೆ ವಿಭಾಗ ಪತ್ರದ ಮುಖಾಂತರ

ಬಂದಿದ್ದ ಸ್ವತ್ತಿನ ಪೈಕಿ ಸ.ನಂ.150/2 ರಲ್ಲಿನ 4 ಎಕರೆ 4 ಗುಂಟೆ ಜಮೀನನ್ನು ಹಾಗೂ ಸ.ನನಂ.183/1 ರಲ್ಲಿ 1 ಎಕರೆ 22 ವರೆ ಗುಂಟೆ ಜಮೀನನ್ನು ದಿನಾಂಕಃ26.04.1966 ರಂದು ರೂ.97,000/- ಗಳಿಗೆ ತನ್ನ ಗೃಹಕೃತ್ಯದ ಮತ್ತು ಜೀವನ ಪೋಷಣೆಗಾಗಿ ನೋಂದಾಯಿತ ಕ್ರಯ ಪತ್ರದ ಮೂಲಕ 2 ನೇ ಪ್ರತಿವಾದಿ ಸಣ್ಣಪಾಪಯ್ಯನಿಗೆ ಮಾರಾಟ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ನಾನು ಸ್ವತಃ ಹೇಳುವುದೇನೆಂದರೆ ಅದು ನಮ್ಮ ತಾತಾನ ಜಮೀನು ಈ ಅಜ್ಜಿಗೆ ಮಾರಾಟ ಮಾಡಲು ಬರುವುದಿಲ್ಲ. 2 ನೇ ಪ್ರತಿವಾದಿ ಸಣ್ಣಪಾಪಯ್ಯ ಸದರಿ ಜಮೀನನ್ನು ಖರೀದಿಸಿದಾಗಿನಿಂದಲೂ ಸ್ವಾಧೀನಾನುಭವ ಹೊಂದಿ ಕಂದಾಯ ವಗೈರೆಗಳನ್ನು ಪಾವತಿ ಮಾಡುತ್ತಾ ಮಾಲೀಕನಾಗಿದ್ದಾನೆ ಎಂದರೆ ಸರಿಯಲ್ಲ. ಕಂದಾಯ ಇಲಾಖೆಯಲ್ಲಿ ಕಂಂದಾಯ ದಾಖಲಾತಿಗಳನ್ನು ಹೆಸರುಗಳ ಬದಲಾವಣೆಗಳನ್ನು ನಾವು ತಕರಾರು ಮಾಡಿಲ್ಲ ನಮಗೆ ಆ ವಿಷಯವೇ ಗೊತ್ತಿಲ್ಲ.

14. ದಿನಾಂಕಃ06.06.1966 ರ ದಾನಪತ್ರ ದಿಃ14.06.1966 ರ ಪಾಲು ವಿಭಾಗ ಪತ್ರ ಇವುಗಳನ್ನು ನನ್ನ ಅಜ್ಜಿಯಾಗಲಿ ತಂದೆಯಾಗಲಿ ನನ್ನ ಚಿಕ್ಕಪ್ಪ ಓಬಯ್ಯನಾಗಲಿ ಇನ್ನೊಬ್ಬ ಪಾಪಣ್ಣನಾಗಲಿ ಎಲ್ಲೂ ಅದನ್ನು ತಕರಾರು ಮಾಡಿಲ್ಲ ಎಂದರೆ ಅವರಿಗ ಮಾಹಿತಿಯೇ ಇರಲಿಲ್ಲ. ಕುರಿಪಾಲಯ್ಯನ ಮೊದಲನೇ ಹೆಂಡತಿ ಪಾಲಮ್ಮ ಕುರಿಪಾಲಯ್ಯನಿಂದ ಸಂಸಾರ ಸುಖ ಹೊಂದದೆ ಇರುವುದರಿಂದ ಕುರಿಪಾಲಯ್ಯನನ್ನು ತೊರೆದು ಹೋಗಿದ್ದಳು ಎಂದರೆ ಸರಿಯಲ್ಲ. ಈ ಬಗ್ಗೆ ಕುರಿಪಾಲಯ್ಯ ದಿ17.11.1945 ರಂದು ಮಾತೃಭೂಮಿ

ಪತ್ರಿಕೆಯಲ್ಲಿ ತನ್ನ ಹೆಂಡತಿ ಬಿಟ್ಟು ಹೋಗಿದ್ದಾಳೆಂದು ಪತ್ರಿಕಾ ಪ್ರಕಟಣೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಆಕೆ ಮನೆಯಲ್ಲಿದ್ದ 400 ರೂ. ನಗದು, 50 ರೂ. ಬೆಲೆ ಬಾಳುವ ಬಂಗಾರದ ಬೆಂಡೋಲೆ, 50 ರೂ. ಬೆಲೆ ಬಾಳುವ ಮೇಟಿ ಮತ್ತು ಮುರ, 300 ರೂ. ಬೆಲೆ ಬಾಳುವ ಬಂಗಾರದ ಅಡ್ಡಿಕೆ ಇವುಗಳನ್ನು ಗಂಡನ ಅನುಮತಿ ಇಲ್ಲದೆ ತೆಗೆದುಕೊಂಡು ಹೋಗಿ ಕೆಟ್ಟ ನಡತೆಯಿಂದ ಜೀವನ ನಡೆಸುತ್ತಿದ್ದಳು ಎಂದು ಪತ್ರಿಕೆಯಲ್ಲಿ ಪ್ರಕಟಗೊಂಡಿರುತ್ತದೆ ಎಂದರೆ ಸರಿಯಲ್ಲ. ನಾನು ಆ ಕಾಲಕ್ಕೆ ಹುಟ್ಟದೇ ಇದ್ದುದ್ದರಿಂದ ಆ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಮ್ಮ ತಾತಾ ಅಂದರೆ ನಮ್ಮ ತಾಯಿಯ ತಂದೆ ಜಿ. ಬಸವನಾಯಕ ನನಗೆ ಹೇಳುತ್ತಿದ್ದರು. ನಮ್ಮ ಅಜ್ಜಿ ಪಾಲಮ್ಮ ಎಲ್ಲೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ.

15. ಚೌಳಕೆರೆ ಗ್ರಾಮದ ಸ.ನಂ.68/6 ರ ಜಮೀನಿನ ಮೂಲ ಮಂಜೂರಿದಾರ ಬೋರಯ್ಯ ಮೃತಪಟ್ಟಿದ್ದಾನೆ ಎಂದರೆ ಸರಿ. ಚೌಳಕೆರೆ ಗ್ರಾಮದ ಖಾಯಂ ನಿವಾಸಿಯಾಗಿದ್ದ ಬೋರಯ್ಯನಿಗೆ ಜಮೀನನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ಸದರಿ ಬೋರಯ್ಯ ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಯಾರಿಗೆ ಸೇರಬೇಕೆದು ಯಾವುದೇ ದಾಖಲೆ ಮಾಡಿಲ್ಲ ಎಂದರೆ ಸರಿ. ಸದರಿ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ, ಅದು ಸರ್ಕಾರಿ ಜಮೀನು ಅದನ್ನು ಸೇರಿಸಲು ಬರುವುದಿಲ್ಲ. ಸದರಿ ಜಮೀನನ್ನು ಚೌಳಕೆರೆ ಗ್ರಾಮಸ್ಥ ಎಂದು ಮಂಜೂರು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಬೋರಯ್ಯ

ಚಿತ್ರ್ಯನಹಟ್ಟಿಯ ಕುರಿಪಾಲಯ್ಯನ ಕುಟುಂಬದ ಸದಸ್ಯ ಅಲ್ಲ ಎಂದರೆ ಸರಿಯಲ್ಲ. ಸದರಿ ಬೋರಯ್ಯ ಚೌಳಕೆರೆ ಗ್ರಾಮದ ಮತದಾರರ ಪಟ್ಟಿಯಲ್ಲಿಯೇ ಸಾಯುವವರೆಗೂ ಅವನ ಹೆಸರು ಮತದಾರರಪಟ್ಟಿಯಲ್ಲಿತ್ತು ಎಂದರೆ ಸರಿ.

16. ಸರ್ಕಾರದಿಂದ 7 ನೇ ವಾದಿಯ ಗಂಡ ಓಬಯ್ಯನಿಗೆ ಚೌಳಕೆರೆ ಗ್ರಾಮದಲ್ಲಿ ಮಂಜೂರಾಗಿದೆ ಎಂದು ನಾನು ದಾಖಲೆಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ. ಚೌಳಕೆರೆ ಗ್ರಾಮದ ಖಾಯಂ ನಿವಾಸಿಯಾಗಿದ್ದ ಓಬಯ್ಯನಿಗೆ ಸದರಿ ಜಮೀನನ್ನು ಮಂಜೂರು ಮಾಡಿಕೊಡಲಾಗಿದೆ ಎಂದರೆ ಸರಿ, ನಾನು ಸ್ವತಃ ಹೇಳುವುದೇನೆಂದರೆ ಅವನಿಗೆ ಮದುವೆ ಅಲ್ಲಿಯೇ ಆಗಿದ್ದು ಅಲ್ಲಿಯೇ ಇದ್ದ. ಓಬಯ್ಯ ಸದರಿ ಜಮೀನು ಜೀವಂತ ಇದ್ದಾಗ ಯಾರಿಗೆ ಸೇರಬೇಕು ಎನ್ನುವುದರ ಬಗ್ಗೆ ಯಾವುದೇ ದಾಖಲೆಗಳನ್ನು ಮಾಡಿ ಇಟ್ಟಿಲ್ಲ ಎಂದರೆ ಸರಿ. ಸದರಿ ಜಮೀನನ್ನು ಕೂಡಾ ಈ ದಾವೆಯಲ್ಲಿ ನಾವು ಸೇರಿಸಿಲ್ಲ ಎಂದರೆ ಸರಿ. ಸದರಿ ಸ್ವತ್ತನ್ನು ಓಬಯ್ಯ ಬಿನ್ ಕುರಿಪಾಲಯ್ಯ ಚೌಳಕೆರೆ ವಾಸಿ ಎಂದು ವಿಳಾಸ ನೀಡಿದ್ದರಿಂದಲೇ ಸದರಿ ಜಮೀನು ಮಂಜೂರಾಗಿದೆ ಎಂದರೆ ಸರಿ. ಸದರಿ ಓಬಯ್ಯ ಚಿತ್ರ್ಯನಹಟ್ಟಿಯ ವಾಸಿ ಅಲ್ಲ ಎಂದರೆ ಸರಿಯಲ್ಲ ನಾನು ಸ್ವತಃ ಹೇಳುವುದೇನೆಂದರೆ ಅವನು ಮೂಲಕ ಚಿತ್ರ್ಯನಹಟ್ಟಿಯವನ್ನು ಮದುವೆಯಾದ ನಂತರ ಚೌಳಕೆರೆ ಹೋಗಿದ್ದನು. ಆತ ಚಿತ್ರ್ಯನಹಟ್ಟಿಯ ಕುರಿಪಾಲಯ್ಯನ ಕುಟುಂಬದ ಸದಸ್ಯ ಅಲ್ಲ ಎಂದರೆ ಸರಿಯಲ್ಲ.

17. ರಿ.ಸ.ನಂ.56/2 ರಲ್ಲಿ 13 ನೇ ವಾದಿ ಪಾಪಣ್ಣನಿಗೆ ಚೌಳಕೆರೆ ಗ್ರಾಮದ ಖಾಯಂ ನಿವಾಸಿಯಾಗಿದ್ದರಿಂದ ಅವನಿಗೂ ಜಮೀನು ಮಂಜೂರಾಗಿದ್ದು ಆ ಜಮೀನನ್ನು ಕೂಡಾ ನಾವು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಬೋರಯ್ಯ, ಪಾಪಯ್ಯ, ಪಾಪಣ್ಣ ಇವರು ಚಿತ್ರ್ಯಯ್ಯನಹಟ್ಟಿಯ ವಾಸಿಗಳು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ಅವರು ಚಿತ್ರ್ಯಯ್ಯನಹಟ್ಟಿಯ ಮೂಲ ವಾಸಿಗಳು ಎಂದು ತೋರಿಸಲು ನಾನು ಯಾವುದೇ ದಾಖಲಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

18. ಹಾಲಿ ನಾವು ಅರ್ಧ ಜನ ಚಳ್ಳಕೆರೆಯಲ್ಲಿ ವಾಸವಾಗಿದ್ದೇವೆ, ಇನ್ನರ್ಧ ಜನ ಅಂದರೆ ಓಬಯ್ಯ ಬೋರಯ್ಯ ಚೌಳಕೆರೆಯಲ್ಲಿದ್ದಾರೆ. ನಾನು ಹುಟ್ಟಿದಾಗಿನಿಂದಲೂ ಅವರು ಚಳ್ಳಕೆರೆಯಲ್ಲಿಯೇ ಅಂದರೆ 1945 ರಿಂದಲೂ ಅವರು ಚಳ್ಳಕೆರೆಯಲ್ಲಿಯೇ ವಾಸವಾಗಿದ್ದಾರೆ. ಬಸಮ್ಮ ಪುಟ್ಟಮ್ಮ ಚಿತ್ರ್ಯಯ್ಯನಹಟ್ಟಿಯ ಅವರ ಗಂಡನ ಮನೆಯಲ್ಲಿ ವಾಸವಾಗಿದ್ದಾರೆ ನಾವು ಅಂದರೆ ನಮ್ಮ ಅಕ್ಕ ತಂಗಿಯರು ಎಲ್ಲರೂ ಚಳ್ಳಕೆರೆಯಲ್ಲಿ ವಾಸವಾಗಿದ್ದೇವೆ. ನಾನು ಸ್ವತಃ ಮುಂದುವರೆದು ಹೇಳುವುದೇನೆಂದರೆ ಚಿತ್ರ್ಯಯ್ಯನಹಟ್ಟಿಯಲ್ಲಿ ವಾಸವಾಗಿದ್ದೇವೆ. ನಾವು ನಮ್ಮ ಚಿಕ್ಕಪ್ಪ ಅಂದರೆ ಪಾಪಣ್ಣನ ಸ್ವಂತ ಮನೆಯಲ್ಲಿ ನಾವೆಲ್ಲ ವಾಸವಾಗಿದ್ದೇವೆ. ನಮ್ಮ ಚಿಕ್ಕಪ್ಪ ಪಾಪಣ್ಣ ಸ್ವಂತ ಮನೆಯನ್ನು ಕಟ್ಟಿಸಿ 15-20 ವರ್ಷಗಳಾದವು. 13 ನೇ ವಾದಿ ಪಾಪಣ್ಣನಿಗೆ ಈಗ 50 ವರ್ಷ.

19. ಬೋರಯ್ಯ ಓಬಯ್ಯ ಮತ್ತು 13 ನೇ ವಾದಿ ಪಾಪಣ್ಣನಿಗೆ ಅವರ ಕುಟುಂಬಕ್ಕೆ ಯಾವುದೇ ಜಮೀನುಗಳು ಇಲ್ಲದ ಕಾರಣ ಚೌಳಕೆರೆ ಗ್ರಾಮದ

ಜಮೀನುಗಳನ್ನು ಸರ್ಕಾರದಿಂದ ಮಂಜೂರು ಮಾಡಿ ಕೊಡಲಾಗಿದೆ ಎಂದರೆ ಸರಿಯಲ್ಲ. ನಾನು ಸ್ವತಃ ಹೇಳುವುದೇನೆಂದರೆ ಜಮೀನು ಇದ್ದವರಿಗೂ ಕೊಡುತ್ತಾರೆ ಇಲ್ಲದವರಿಗೂ ಕೊಡುತ್ತಾರೆ. ವಾದಿಯರಿಗೂ ಮತ್ತು ಪ್ರತಿವಾದಿಯರಿಗೂ ಯಾವುದೇ ರೀತಿಯ ಸಂಬಂಧವೇ ಇಲ್ಲ ಎಂದರೆ ಸರಿಯಲ್ಲ. ನಾವು ವಾದಿಯರು ಯಾರು ಕುರಿಪಾಲಯ್ಯನ ಕುಟುಂಬಕ್ಕೆ ಸೇರದ ಕಾರಣ ತಹಶೀಲ್ದಾರ್ ರಿಂದ ಪಡೆದ ವಂಶವೃಕ್ಷವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ವಂಶವೃಕ್ಷವನ್ನು ಹಾಜರುಪಡಿಸದೇ ಇದ್ದರೂ ಸಹ ವಂಶವೃಕ್ಷವನ್ನು ಹಾಜರುಪಡಿಸಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

20. ಪಾಪಮ್ಮ ತನ್ನ ಭಾಗಕ್ಕೆ ಬಂದ ಸ.ನಂ.151 ರ ಸ್ವತ್ತಿನ ಬಗ್ಗೆ ದಿನಾಂಕಃ14.11.1991 ರಂದು 1 ನೇ ಪ್ರತಿವಾದಿ ಬೈನಾಕಲ್ ಬೋರಯ್ಯ ಯಾನೆ ಬಟಾಣಿ ಬೋರಯ್ಯನಿಗೆ ವಿಲ್ ಬರೆದುಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. ಆ ಪ್ರಕಾರ 1 ನೇ ಪ್ರತಿವಾದಿಯೇ ಸದರಿ ಸ.ನಂ.151 ರ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇದ್ದಾನೆ ಎಂದರೆ ಸರಿಯಲ್ಲ.

21. ನನ್ನ ಪ್ರಮಾಣ ಪತ್ರದ 8 ನೇ ಪ್ಯಾರಾದಲ್ಲಿ ದಿಃ13.09.1966 ರಲ್ಲಿ ಓಬಯ್ಯ, ಪಾಪಯ್ಯ ಮತ್ತು ಪಾಪಮ್ಮ ಪಾಲುವಿಭಾಗ ಮಾಡಿಕೊಂಡಿದ್ದಾರೆಂದು ನಾನು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದ10 ನೇ ಪ್ಯಾರಾದಲ್ಲಿ ಪಾಪಮ್ಮ ಕೋಂ ಬೈನಾಕಲ್ ಪಾಲಯ್ಯ ಯಾನೆ ಕುರಿಪಾಲಯ್ಯ ಅವರಿಗೆ ಪಾಲು ವಿಭಾಗದಲ್ಲಿ ಬಂದ ಆಸ್ತಿಗಳನ್ನು ಬೈನಾಕಲ್ ಬೋರಯ್ಯ ಮತ್ತು

ಸಣ್ಣಪಾಪಯ್ಯ ಇವರಿಗೆ ದಿನಾಂಕಃ 01.06.1996 ರಂದು ಮತ್ತು 25.09.1997 ರಂದು ಅನುಕ್ರಮ ರೂ97,000/- ಗಳಿಗೆ ಮಾರಾಟ ಮಾಡಿರುತ್ತಾರೆ ಎಂದು ಬರೆಸಿರುತ್ತೇನೆ ಎಂದರೆ ಆ ರೀತಿ ಮೋಸ ಮಾಡಿರುತ್ತಾರೆಂದು ಬರೆಸಿರುತ್ತೇನೆ.

22. ನನ್ನ ಪ್ರಮಾಣ ಪತ್ರದ 11 ನೇ ಪ್ಯಾರಾದಲ್ಲಿ ಹಿಂದೆ ಅಸಲು ದಾವೆಯನ್ನು 14 ನೇ ಪ್ರತಿವಾದಿ ಪಾಪರಾಜು ಸಲ್ಲಿಸಿದ್ದ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಸಲು ದಾವೆ 82/1991 ಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ನಾನು ಹಾಜರುಪಡಿಸಿದ್ದೇನೆ. ಸದರಿ ದಾವೆಯ ಯಾವ ದಾಖಲೆಗಳನ್ನು ಹಾಜರುಪಡಿಸದೇ ಇದ್ದರೂ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

23. ನನ್ನ ಪ್ರಮಾಣ ಪತ್ರದ 2 ನೇ ಪ್ಯಾರಾದಲ್ಲಿ ಸದರಿ ಅಸಲು ದಾವೆ 82/91 ರ ತೀರ್ಪು ಮತ್ತು ಡಿಕ್ರಿಯಾಗಿ ಆರ್ ಎ 15/2002 ರಂತೆ ಅಪೀಲು ಸಲ್ಲಿಸಿ ಸೆಟ್ ಅಸೈಡ್ ಮಾಡಿಸಿಕೊಂಡಿರುತ್ತಾರೆಂದು ನಾನು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಆರ್ ಎ ಬಗ್ಗೆ ಕೂಡಾ ನಾನು ಯಾವ ದಾಖಲೆಗಳನ್ನು ಹಾಜರುಪಡಿಸದೇ ಇದ್ದರೂ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಕಾನೂನು ಬಾಹಿರವಾಗಿ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆಂದು ನಾನು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ವಾದಿಯರು ದಾವಾ ಷೆಡ್ಯೂಲ್ ?ಎ ಮತ್ತು ಬಿ ಸ್ವತ್ತಿನ ಸಾವಧೀನದಲ್ಲಿವೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಸಾವಧೀನದಲ್ಲಿರುವುದರ ಬಗ್ಗೆ ನಾನು ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ನಾವು 13 ಜನ ದಾವಾ ಸ್ವತ್ತುಗಳಿಗೆ ಯಾವುದೇ ಕಂದಾಯ ಕಟ್ಟಿಲ್ಲ. ನಾವು ಕಂದಾಯ ಕಟ್ಟಲು ಪ್ರಯತ್ನ ಪಟ್ಟಿದ್ದೀರಾ ಎಂದರೆ ನಾವು ಕಂದಾಯ ಕಟ್ಟಲು ಹೋದಾಗ ದಾಖಲೆ ಅವರ ಹೆಸರಿನಲ್ಲಿದೆ. ನಾವು ವಾದಿಯರೆಲ್ಲರೂ 26 ನೇ ಪ್ರತಿವಾದಿ ಪೀಲೇರ ಪಾಲಮ್ಮನ ಜೊತೆಗೆ ಷರೀಕಾಗಿ ಈ ಸುಳ್ಳು ದಾವೆಯನ್ನು ತಂದಿರುತ್ತೇವೆ ಎಂದರೆ ಸರಿಯಲ್ಲ.

24. ದಿಃ14.06.1966 ರಂದೇ ದಾವಾ ಸ್ವತ್ತುಗಳ ಬಗ್ಗೆ ಕೊಂಡಬೋರಯ್ಯನ ವಾರಸುದಾರರ ನಡುವೆ ವಿಭಾಗ ಪತ್ರದ ಮೂಲಕ ಸ್ವತ್ತುಗಳು ವಿಭಾಗ ಆಗಿರುವುದರಿಂದ ಈಗ ನಾವು ತಂದಿರುವ ದಾವೆ ಊರ್ಜಿತವಾಗತಕ್ಕದ್ದಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ನನ್ನ ಪೂರ್ವಜರು ಕುರಿಪಾಲಯ್ಯನ ಕುಟುಂಬಕ್ಕೆ ಸೇರದೇ ಇರುವುದರಿಂದ ಅವನ ಕುಟುಂಬದಲ್ಲಿ ಆದ ನೋಂದಾಯಿತ ಪತ್ರ ಗಳ ವ್ಯವಹಾರಗಳ ಬಗ್ಗೆ ಯಾವುದೇ ಪ್ರಶ್ನೆಯನ್ನು ಮಾಡಿಲ್ಲ ಎಂದರೆ ಅವು ನನ್ನ ಗಮನಕ್ಕೆ ಬಂದಿಲ್ಲ.

25. ನಾನು 2013 ನೇ ಸಾಲಿನಲ್ಲಿ ಭಾಗ ಕೇಳಲು ಹೋಗಿದ್ದೆ. ನಮಗೆ ಭಾಗ ಇಲ್ಲ ಎಂದು ಹೇಳಿದ್ದರು. ತಾರೀಖು ತಿಂಗಳು ಹೇಳಲಾಗುವುದಿಲ್ಲ. ಆಗ ನಾನು ಮತ್ತು ನಮ್ಮ ಚಿಕ್ಕಪ್ಪನ ಮಕ್ಕಳು ಹೋಗಿದ್ದೆವು. ಬಟಾಣಿ ಬೋರಯ್ಯ,

ಸಣ್ಣಪಾಪಯ್ಯ, ಸಣ್ಣಪಾಲಯ್ಯ, ಬಡಗೇರ ಪಾಪಣ್ಣ, ಬೋರಯ್ಯ ಇವರನ್ನೆಲ್ಲಾ ನಾವು ಭಾಗ ಕೊಡುವಂತೆ ಕೇಳಿದ್ದೆವು. ನಿಮ್ಮ ಭಾಗ ಎಲ್ಲಿದೆ ಎಂದು ಅವರು ಕೇಳಿದ್ದರು.ನಮಗೆ ದಾವಾ ಸ್ವತ್ತುಗಳ ಬಗ್ಗೆ ಆಗಿರುವ ವ್ಯವಹಾರಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಪಾಲಮ್ಮ ಕುರಿಪಾಲಯ್ಯನ ಮೊದಲನೇ ಹೆಂಡತಿ ಎನ್ನುವ ಒಂದೇ ವಿಚಾರವನ್ನು ಇಟ್ಟುಕೊಂಡು ಈ ಸುಳ್ಳು ದಾವೆಯನ್ನು ತಂದಿರುತ್ತೇನೆ ಎಂದರೆ ಸರಿಯಲ್ಲ. ನಮಗೆ ವಾದಿಯರ್ಯಾರಿಗೂ ದಾವಾ ಸ್ವತ್ತುಗಳಲ್ಲಿ ಹಕ್ಕಾಗಲಿ ಸ್ವಾಧೀನವಾಗಲಿ ಇರಲೇ ಇಲ್ಲ ಎಂದರೆ ಸರಿಯಲ್ಲ.

26. ವಾದ ಪತ್ರದೊಂದಿಗೆ ನಾವು ಸಲ್ಲಿಸಿರುವ ವಂಶವೃಕ್ಷವನ್ನು ನಮಗೆ ಅನುಕೂಲವಾಗುಂತೆ ನಮ್ಮ ವಕೀಲರಿಂದ ತಯಾರು ಮಾಡಿಸಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೂ ನಮಗೆ ಕುರಿಪಾಲಯ್ಯನ ಕುಟುಂಬದವರಿಗೂ ನಮಗೂ ಸಂಬಂಧವೇ ಇಲ್ಲದಿದ್ದರೂ ಸುಳ್ಳು ಅಂಶಗಳನ್ನು ಕಾಣಿಸಿ ಸುಳ್ಳು ದಾವೆಯನ್ನು ತಂದಿರುತ್ತೇವೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಶ್ರೀ ಎಂ ಎಸ್ ಆರ್ ವಕೀಲರಿಂದ **10** ನೇ ಪ್ರತಿವಾದಿಯರ ಪರವಾಗಿಃ

ಶ್ರೀ ಕೆ ವಿ ಹೆಚ್ ಆರ್ ಸಮಯ ಕೋರಿರುತ್ತಾರೆ, ನೀಡಿದೆ.

ಪಾಟೀ ಸವಾಲು ಶ್ರೀ ಬಿ ಟಿ ಜಿ  ವಕೀಲರಿಂದ 26 ನೇ ಪ್ರತಿವಾದಿಯರ

ಪರವಾಗಿಃ

ಸಮಯ ಕೋರಿರುತ್ತಾರೆ, ನೀಡಿದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಚಳ್ಳಕೆರೆ.